ಕಾಸ್ಟ್ಯೂಮ್ ಅನ್ನು ಜನರಿಗೆ ಪರಿಚಯಿಸಬೇಕು ಎನ್ನುವ ಕನಸಿತ್ತು. ಅದೇ ಸಮಯಕ್ಕೆ ಝೀ ಕನ್ನಡದ 'ಡ್ರಾಮಾ ಜೂನಿಯರ್ಸ್' ತಂಡ 8–10 ನಿಮಿಷದಲ್ಲಿ ದೊಡ್ಡಾಟದ ಒಂದು ಪ್ರಯೋಗ ಮಾಡಲು ಕೇಳಿಕೊಂಡಿತು. ಅದಕ್ಕಾಗಿ ಚಿಕ್ಕ ಕಥೆ ರೂಪಿಸಿ ಒಂದು ಪ್ರಯೋಗ ಮಾಡಿದೆ. ನಂತರ ನಿರಂತರವಾಗಿ 'ಕಲೋತ್ಸವ' ಮತ್ತು 'ಡ್ರಾಮಾ ಜೂನಿಯರ್ಸ್'ಗೆ ಒಂದೊಂದು ಪ್ರಸಂಗವನ್ನು ಕಲಿಸುತ್ತಾ ಬಂದಿದ್ದೇನೆ. ಇದಕ್ಕೆಲ್ಲ ಶಿವರಾಮ ಕಾರಂತರು ನನಗೆ ಸ್ಫೂರ್ತಿ. ಅವರೇ ಮೊದಲ ಬಾರಿಗೆ ಕನ್ನಡ ಜನಪದ ರಂಗಭೂಮಿ (ಯಕ್ಷಗಾನ) ವಿದೇಶಕ್ಕೆ ಪರಿಚಯಿಸಿದ್ದರು.

ಟೀವಿ ಮಾಧ್ಯಮದಿಂದ ಜನಪ್ರಿಯವಾದ ನಮ್ಮ ಆಟವನ್ನು ನೋಡಿ ಬೆಲ್ಜಿಯಂನಿಂದ ಆಹ್ವಾನ ಬಂತು. ಕಾಸ್ಟ್ಯೂಮ್, ಮ್ಯೂಸಿಕ್ ರೆಕಾರ್ಡ್ ಮಾಡಿಕೊಂಡು ಹೊರಟೆ. ಬೆಲ್ಜಿಯಂನ 'ಘೆಂಟ್ ವಿಶ್ವವಿದ್ಯಾಲಯ'ದ ವಿದ್ಯಾರ್ಥಿಗಳಿಗೆ 15 ದಿನದಲ್ಲಿ ಒಂದು ಪ್ರಸಂಗ ಕಲಿಸಿದೆ. ಸ್ಥಳೀಯರು ಆ ಪ್ರದರ್ಶನ ಕಂಡು ಖುಷಿಪಟ್ಟರು. ಅಲ್ಲಿಂದ ಬಂದ ಮೇಲೆ ಇನ್ನೂ ಸ್ವಲ್ಪ ಟ್ಯೂನ್ ಮಾಡಿದರೆ ಪ್ರಪಂಚವೇ ಮೆಚ್ಚುವ ಕಲಾಪ್ರಕಾರ ಇದಾಗುತ್ತದೆ ಅನ್ನಿಸುತ್ತಿದೆ. ಈ ಸಂಬಂಧ ಬೇರೆ ಬೇರೆ ದೊಡ್ಡಾಟದ ತಂಡಗಳನ್ನು ಸಂಪರ್ಕಿಸಿದ್ದೇನೆ. ಕಿರುತೆರೆ ಡ್ರಾಮಾದ ಪ್ರಭಾವದಿಂದ ಶಾಲೆಗಳಲ್ಲೂ ಕಲಿಸುತ್ತಿದ್ದಾರೆ.

## ಬಣ್ಣಗಾರರೇ ಮಿಂಚೋದು

ದೊಡ್ಡಾಟ ರಂಗದಲ್ಲಿ ಏನೆಲ್ಲ ಮಾಡುವ ಸಾಧ್ಯತೆ ಇದೆ ಎನ್ನುವ ಪ್ರಬಂಧವನ್ನು ಕುವೆಂಪು ವಿಶ್ವವಿದ್ಯಾಲಯದಲ್ಲಿ ಪ್ರಸ್ತುತಪಡಿಸಿದೆ. ಬಣ್ಣಗಾರರೂ ಸೇರಿ ಸಾಕಷ್ಟು ಕರಕುಶಲ ಕೈಗಳು ಅದಕ್ಕಾಗಿ ಶ್ರಮಿಸುವ ಅಗತ್ಯ ಇದೆ. ಪಾರಂಪರಿಕ ಮೇಕಪ್, ಕಾಸ್ಟ್ಯೂಮ್ ಪ್ರಸ್ತುತ ಸಂದರ್ಭಕ್ಕೆ ಹೊಂದಿಕೆ ಆಗದೆ ಇರಬಹುದು. ಆಧುನಿಕ ಬದುಕಿಗೆ ಹೊಂದಿಕೆ ಆಗುವಂತೆ ಅದರಲ್ಲಿ ಸುಧಾರಣೆ ಅಗತ್ಯವಿದೆ. ಬಳ್ಳಾರಿ, ರಾಯಚೂರು ಭಾಗದಲ್ಲಿ ಮರದಿಂದ ತಯಾರಿಸಿದ ಕಿರೀಟ ಕಟ್ಟುತ್ತಾರೆ. ಅಧಿಕ ತೂಕದ ಅದನ್ನು ರಟ್ಟು, ತಗಡಿನಿಂದ ಮಾಡುವುದು ಸೂಕ್ತ ಆಗಬಹುದು. ಭುಜಕೀರ್ತಿ ಮತ್ತು ಕಿರೀಟಗಳು ಅದ್ದೂರಿಯಾಗಿ ವಿಜೃಂಭಿಸುತ್ತವೆ. ಆ ಅಲಂಕಾರ ನೋಡಿದರೆ ಸೊಂಟದ ಕೆಳಭಾಗ ಪೇಲವವಾಗಿರುತ್ತದೆ. ಈ ಅಂಗರಚನೆಯ ವಿನ್ಯಾಸ ಬದಲಿಸುವ ಅಗತ್ಯ ಇದೆ. ಮುಖಕ್ಕೆ ಮೇಕಪ್ ಮಾಡಲು ಗಾಢ ಬಣ್ಣ ಹಚ್ಚುತ್ತಾರೆ. ಕಣ್ಣು ದೊಡ್ಡದಾಗಿ ಕಾಣುವಂತೆ, ಸಂವಹನಕ್ಕೆ ಕಣ್ಣನ್ನು ಸಜ್ಜುಗೊಳಿಸಲು ಬಣ್ಣಕ್ಕೆ ಒತ್ತು ಕೊಡುತ್ತಾರೆ. ಬಯಲ ಪರಿಕಲ್ಪನೆಯಿಂದ ಥಿಯೇಟರ್ ಒಳಗೆ ದೊಡ್ಡಾಟ ಬಂದಿರುವುದರಿಂದ ಅದಕ್ಕೆ ತಕ್ಕಂತೆ ವಿನ್ಯಾಸ ಮಾಡಬೇಕು. ಸುಧಾರಿತ ಲೈಟ್ ವ್ಯವಸ್ಥೆ ಕೂಡ ಅದಕ್ಕೆ ಪೂರಕವಾಗಿ ಕೆಲಸ ಮಾಡುತ್ತದೆ.

ಹಳೇ ಮೇಕಪ್ ಬೇಡ ಎಂದು ಅದನ್ನು ನಿರಾಕರಿಸುವಂತಿಲ್ಲ. ಇವತ್ತಿನ ಜಗತ್ತಿಗೆ ಅದನ್ನು ಹೊಂದಿಸುವಂತೆ ಸಂಸ್ಕರಿಸಿಕೊಳ್ಳಬೇಕು. ಅದಕ್ಕೆ ಸೂಕ್ತ ಸೌಂದರ್ಯ ಪ್ರಜ್ಞೆ ಮುಖ್ಯ. ಈ ಹಿನ್ನೆಲೆಯಲ್ಲಿ ಬಣ್ಣಗಾರರ ಜೊತೆ ಚರ್ಚಿಸಿ ಸಣ್ಣ ಸಣ್ಣ ಬದಲಾವಣೆ ಮಾಡಿಕೊಳ್ಳಬೇಕು. ಬಣ್ಣಕ್ಕೂ ಒಂದು ಭಾಷೆ ಇದೆ. ಯಾವ ಪಾತ್ರಕ್ಕೆ ಯಾವ ಬಣ್ಣ ಹಾಕಬೇಕು ಎನ್ನುವ ನಿಯಮವೂ ದೊಡ್ಡಾಟದಲ್ಲಿದೆ. ಆಧುನಿಕ ರಂಗಭೂಮಿ ಕೂಡ ಬಣ್ಣಗಳ ಭಾವಸ್ಥಿತಿಯನ್ನು ಹೇಳುತ್ತದೆ. ಈ ನಿಯಮಗಳನ್ನು ಅರಿತು ಸೂಕ್ಷ್ಮವಾಗಿ ಬದಲಿಸಿಕೊಳ್ಳಬೇಕು.

## ಹವ್ಯಾಸಿ ತಂಡಗಳೂ ಜನಪದ ಆಡಬೇಕು

ಸಾಣೆಹಳ್ಳಿ–ನೀನಾಸಂ ಸೇರಿದಂತೆ ಕೆಲವೊಂದು ರಂಗತಂಡಗಳು ಸುತ್ತಾಟ ಮಾಡುತ್ತವೆ. ಕೆಲ ರಂಗ ಶಾಲೆಗಳಲ್ಲಿ ಆಂಗಿಕ ವಿನ್ಯಾಸ ಕಲಿಸಲು ಜನಪದ ರಂಗಭೂಮಿಯನ್ನು ಪರಿಚಯಿಸುತ್ತಾರೆ. ಆ ತಾಕತ್ತು ಜನಪದ ರಂಗಭೂಮಿಗೆ ಇದೆ. ಆದರೆ ದೊಡ್ಡಾಟವನ್ನು ಆಧುನಿಕ ರಂಗಭೂಮಿಯಲ್ಲಿ ಮಾಡಿದ್ದು ತೀರ ಕಡಿಮೆ. ಅನ್ಯ ರಾಜ್ಯ, ಅನ್ಯ ದೇಶಗಳಿಗೆ ಈ ಕಲೆಯನ್ನು ಪರಿಚಯಿಸುವ ಕೆಲಸವೂ ಅಷ್ಟಾಗಿಲ್ಲ. ಈ ಕ್ಷೇತ್ರದಲ್ಲಿ ಸಾಕಷ್ಟು ಜನ ಕೆಲಸ ಮಾಡಿದ್ದಾರೆ. ದೊಡ್ಡಾಟದ ಪ್ರಸಂಗಗಳನ್ನು ಆಗಾಗ ಸುತ್ತಾಟಕ್ಕೂ ಆಯ್ಕೆ ಮಾಡಿಕೊಳ್ಳಬೇಕು. ಇದನ್ನು ಸಾಣೆಹಳ್ಳಿ ಸ್ವಾಮೀಜಿ ಬಳಿ ಕೂಡ ಚರ್ಚಿಸಿದ್ದೇನೆ.

'ಕನಕ ಮಾರ್ಗ' ಸಿನಿಮಾದಲ್ಲಿ ದೊಡ್ಡಾಟದ ಸನ್ನಿವೇಶ ಪರಿಚಯಿಸಿದ್ದೇನೆ. ಅದರ ಶ್ರೇಷ್ಠತೆಯನ್ನು ಎಲ್ಲಿ ಎತ್ತಿ ಹಿಡಿಯಲು ಸಾಧ್ಯ ಎನ್ನುವ ಶೋಧವನ್ನು ಮಾಡುತ್ತಿದ್ದೇನೆ. ನನ್ನ ವ್ಯಾಪ್ತಿ ಮತ್ತು ಮಿತಿಯಲ್ಲಿ ಯಾರೇ ಕರೆದರು ಹೋಗಿ ದೊಡ್ಡಾಟ ಕಲಿಸುತ್ತೇನೆ. ಹಾಗಾಗಿ ರಾಜ್ಯದ ವಿಶ್ವವಿದ್ಯಾಲಯಗಳು, ರಂಗಶಾಲೆಗಳು, ಮಕ್ಕಳ ಬೇಸಿಗೆ ಶಿಬಿರಗಳಲ್ಲಿ ನಿರಂತರವಾಗಿ ತೊಡಗಿಕೊಳ್ಳುತ್ತೇನೆ. ಒಂದೇ ಶಾಲೆ ಅಥವಾ ಒಂದು ಪ್ರದೇಶಕ್ಕೆ ಸೀಮಿತವಾಗಿಲ್ಲ. ಶನಿವಾರ, ಭಾನುವಾರ ಬೇರೆ ಶಾಲೆಗಳಿಗೆ ಹೋಗ್ತೀನಿ. ಬೇಸಿಗೆ ರಜೆ ದಿನಗಳನ್ನು ನಾನು ಎಂದೂ ಮನೆಯಲ್ಲಿ ಕಳೆದಿಲ್ಲ. ಎಲ್ಲಿ ಸಾಧ್ಯ ಇದೆಯೋ ಅಲ್ಲಿ ಸಣ್ಣಾಟ–ದೊಡ್ಡಾಟ, ಹೆಜ್ಜೆಮೇಳ ಕಲಿಸುತ್ತೇನೆ.

ರಂಗತಂಡಗಳು ದೊಡ್ಡಾಟವನ್ನು ಒಳಗೊಂಡರೆ ಅದರ ವೈಭವ ಮರುಕಳಿಸುತ್ತದೆ. ಇದರಲ್ಲಿ ಅತೀತ ಕಲ್ಪನೆ ಇದೆ. ಭೀಮ ಎಂದರೆ ನೂರಾನೆ ಬಲ ಇರುವ ವ್ಯಕ್ತಿ. ಅಂದರೆ, ಅವನ ಆಂಗಿಕ ವಿನ್ಯಾಸ, ಮಾತು, ಆರ್ಭಟ ಹೇಗಿರಬೇಕು ಎಂದು ಕಲ್ಪಿಸಿಕೊಳ್ಳುವುದೇ ಒಂದು ಸಂಭ್ರಮ. ಅದನ್ನು ರಂಗಕ್ಕೆ ತರಬೇಕು. ಈ ಹಿನ್ನೆಲೆಯಲ್ಲೇ ತಿರುಗಾಟಕ್ಕೆ ಒಂದು ಆಟ ಮಾಡಬೇಕು ಎನ್ನುವ ಆಸೆ ಇದೆ.



ದೊಡ್ಡಾಟದ ತಾಲೀಮು ನೀಡುತ್ತಿರುವ ಕೃಷ್ಣಮೂರ್ತಿ ಎನ್. ತಾಳಿಕಟ್ಟೆ

## ಮೆಚ್ಚಿನ ನಾಟಕದ ಮೇಷ್ಟ್ರು

ಕೃಷ್ಣಮೂರ್ತಿ ಎನ್. ತಾಳಿಕಟ್ಟೆ, ಶಿಗ್ಗಾಂವಿ ತಾಲ್ಲೂಕಿನ ಕ್ಯಾಲಕೊಂಡದ ಸರ್ಕಾರಿ ಪ್ರೌಢಶಾಲೆಯಲ್ಲಿ ವಿಶೇಷ ಶಿಕ್ಷಕ (ನಾಟಕ). ನೀನಾಸಂನಲ್ಲಿ ರಂಗ ಶಿಕ್ಷಣ ಪಡೆದ ಅವರು ಕನ್ನಡ ಸಾಹಿತ್ಯದಲ್ಲಿ ಎಂ.ಎ., ಬಿಎಡ್ ಮಾಡಿದ್ದಾರೆ.

ರಂಗಭೂಮಿಗೆ ದೊಡ್ಡವರು ಚಿಕ್ಕವರು ಎನ್ನುವ ಭೇದ ಇಲ್ಲ. ಗಂಭೀರ ಸಂಗತಿಗಳನ್ನು ಗಂಭೀರವಾಗಿಯೇ ಹೇಳಬೇಕು. ಮಕ್ಕಳ ರಂಗಭೂಮಿ ಎಂದು ನೀತಿಪಾಠಕ್ಕೆ ಸೀಮಿತ ಮಾಡಬಾರದು. ಮಕ್ಕಳ ನಾಟಕವನ್ನೂ ತಿರುಗಾಟದ ನಾಟಕದಷ್ಟೇ ಪ್ರಬುದ್ಧವಾಗಿ ಮಾಡಬಹುದು ಎನ್ನುವುದು ಅವರ ಪ್ರತಿಪಾದನೆ.

'ಕಾರ್ತವೀರ್ಯಾರ್ಜುನ ಕಾಳಗ', 'ತಲೆಕೆಟ್ಟ ರಾಜ', 'ದಕ್ಷ ಯಜ್ಞ', 'ಮನ್ಮಥ ದಹನ' ಪ್ರಮುಖ ದೊಡ್ಡಾಟವನ್ನು ವಿದ್ಯಾರ್ಥಿಗಳಿಂದ ಮಾಡಿಸಿದ್ದಾರೆ. ಮಕ್ಕಳಿಗಾಗಿ 'ಕನಸಿನಲೋಕ', 'ಒಂದು ಮುತ್ತಿನ ಕಥೆ', 'ಕಳ್ಳರ ಸಂತೆ', 'ದಾಸನಾಗು', 'ದೇವರ ಹೆಣ', 'ಹಲಗಲಿ ಬೇಡರು', 'ಊರುಭಂಗ', 'ನನ್ನ ಕನಸಿನ ಲೋಕ' ನಾಟಕಗಳನ್ನು ರೂಪಿಸಿದ್ದಾರೆ. ಪಠ್ಯಕ್ಕೆ ರಂಗರೂಪ ನೀಡುವ ಜೊತೆಗೆ, ಶಾಲೆಯ ಕೈತೋಟ, ಮಕ್ಕಳ ಶಿಸ್ತು ಕಲಿಸುವ ಬಹುಮುಖ ಕಾರ್ಯದಲ್ಲಿ ವಿದ್ಯಾರ್ಥಿಗಳಿಗೆ ಮೆಚ್ಚಿನ ಶಿಕ್ಷಕರು.